# <u>ಕೊಟ್ಟಸಾಲವ ಕೊಡದೆ ಭಂಡಾಟ ಮಾಡುತಾನೆ</u>

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 119.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 203.
3. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 405.
4. **Note:** Lyrics given without highlights are as per Ref. 2. The wordings given in yellow highlights are as per Ref. 1. These wordings are slightly different. The wordings in Ref. 3 are similar to Ref. 2.

ರಾಗ: ಕೇದಾರಗೌಳ ತಾಳ: ಝಂಪೆ

ಕೊಟ್ಟ ಸಾಲವ ಕೊಡದೆ ಭಂಡಾಟ ಮಾಡುತಾನೆ || ಪ ||
ಎಷ್ಟು ಬೇಡಿದರೆನ್ನ ಪೋಯೆನ್ನುತಾನೆ || ಅಪ ||

ಭರದಿ ಕೇಳಲು ಜಲದಿ ಕಣ್ಣು ಬಾಯಿ ಬಿಡುತಾನೆ
ತರುಬಿ ಕೇಳಲು ಕಲ್ಲು ಹೊತ್ತೈತಾನೆ
ಉರುಬಿ ಕೇಳಲು ಊರು ಅಡವಿಯೊಳಗಿರುತಾನೆ
ಇರುಳು ಹಗಲಲ್ಲಿ ಕಾಣಿಸಿಕೊಳ್ಳುತಾನೆ || ೧ ||

ಕಂಡು ನಿಲ್ಲಿಸಲೆಂದು ಕಾಲಿನಲ್ಲಿ ನಿಲ್ಲುತಾನೆ
ಕೊಂಡ ಸಾಲಕೆ ಕೊಡಲಿ ಪಿಡಿವುತಾನೆ
ಉಂಡರಾಣೆಯೆನಲು ಉಪವಾಸವೈಧಾನೆ
ಭಂಡುತನದಲಿ ಠಕ್ಕು ನಡೆಸ್ಯಾಡುತಾನೆ || ೨ ||

ಕೆಟ್ಟು ಬೈಯಲು ಲಜ್ಜೆ ಹೇವವನು ತೊರೆವುತಾನೆ
ಕೊಟ್ಟು ಹೋಗೆನಲು ಕಲಿಯಾಗುತಾನೆ
ಸೃಷ್ಟಿಗೊಡೆಯ ಶ್ರೀರಂಗಪಟ್ಟಣದ ಪುರಂದರ-
ವಿಠ್ಠಲೇಶನು ನಮ್ಮ ಪಶ್ಚಿಮದ ರಂಗನಾಥ || ೩ ||

ರಾಗ: ಕೇದಾರಗೌಳ ತಾಳ: ಅಟ

ಕೊಟ್ಟ ಸಾಲವ ಕೊಡದೆ ಭಂಡಾಟ ಮಾಡುತಿಹನೆ
ಎಷ್ಟು ಕೇಳಿದರೆನಗೆ ಒಯೆನ್ನದಿಹನೆ

ಭರದಿ ಕೇಳಲು ಜಲದಿ ಕಣ್ಣ ಬಿಡುತಿಹನೆ
ತರುಬಿ ಕೇಳಲು ಕಲ್ಲು ಹೊತ್ತು ನಿಂತಿಹನೆ
ಮರಳಿ ಕೇಳಲು ಊರ ಅಡವಿ ಸೇರುವನೆ
ಇರುಳು ಹಗಲೆಲ್ಲ ಕಾಣಿಸಿಕೊಳ್ಳದಿಹನೆ

ಕಂಡು ನಿಲ್ಲಿಸಲೊಂದು ಕಾಲಲಿ ನಿಲುವನೆ
ಕೊಂಡ ಸಲಾಕೆ ಕೊಡಲಿ ಪಿಡಿದು ನಿಲ್ಲುವನೆ
ಉಂಡರಾಣೆಯೆಂದು ಉಪವಾಸವಿರುವನೆ
ಭಂಡನಂದದಿ ಠಕ್ಕು-ಟೌಳಿ ನಡಿಸುವನೆ

ಕೆಟ್ಟು ಬೈಯಲು ಲಜ್ಜೆ-ಹೇವ ತೊರೆಯುವನೆ
ಕೊಟ್ಟು ಪೋಗೆನ್ನಲು ಕಲಿಯು ಆಗುವನೆ
ಸೃಷ್ಟಿಗೊಡೆಯ ಶ್ರೀರಂಗಪಟ್ಟಣದ ಪುರಂದರ-
ವಿಠ್ಠಲೇಶನು ನಮ್ಮ ಪಶ್ಚಿಮ ರಂಗನಾಥ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಪೋ ಎನ್ನುತ್ತಾನೆ** – ಹೋಗೆನ್ನುತಾನೆ.

**ಜಲದಿ ಕಣ್ಣು ಬಿಡು...** – ಮತ್ಸ್ಯಾವತಾರದಲ್ಲಿ.

**ಕಲ್ಲು ಹೊತ್ತು ನಿಂತಿಹನೆ** – ಕೂರ್ಮಾವತಾರದಲ್ಲಿ.

**ಅಡವಿ ಸೇರುವನೆ** – ವರಾಹಾವತಾರದಲ್ಲಿ.

**ಇರುಳು ಹಗಲೆಲ್ಲ ಕಾಣಿಸಿಕೊಳ್ಳದಿಹನೆ** – ನರಸಿಂಹಾವತಾರದಲ್ಲಿ.

**ಕಂಡು .. .. .. ಕಾಲಲಿ** – ತ್ರಿವಿಕ್ರಮನಾಗಿ ವಾಮನಾವತಾರದಲ್ಲಿ.

**ಕೊಡಲಿ ಪಿಡಿದು ನಿಲ್ಲು**– ಪರಶುರಾಮಾವತಾರದಲ್ಲಿ.

**ಉಪವಾಸವಿರುವನೆ** – ರಾಮಾವತಾರದಲ್ಲಿ.

**ಠಕ್ಕು-ಟೌಳಿ ನಡಿಸುವನೆ** – ಕೃಷ್ಣಾವತಾರದಲ್ಲಿ.

**ಕೆಟ್ಟು ಬೈಯಲು...** – ಬೌದ್ಧಾವತಾರದಲ್ಲಿ.

**ಕಲಿಯು ಆಗುವನೆ** – ಕಲ್ಕ್ಯವತಾರದಲ್ಲಿ.

**ಪಶ್ಚಿಮದ ರಂಗನಾಥ** – ಶ್ರೀರಂಗದಲ್ಲಿ ಪೂರ್ವರಂಗನಾಥನೆಂದೂ ಶ್ರೀರಂಗಪಟ್ಟಣದಲ್ಲಿ ಪಶ್ಚಿಮರಂಗನಾಥನೆಂದೂ ಎಣಿಕೆ.

**Classification:** Keerthane
**Ankita:** purandara vittala
**Location:** Srirangapatna, Karnataka
**Category:** Krishna Leele, Dashavatara.
**Sub-Category:** kannu, bayi, kallu, ooru, kaadu, irulu, hagalu, upavasa, bayyi, nachike, srirangapatna, ranga, Krishna, dashavatara.
**Pravachana:** NA
**Explanation:** NA